# ಪ್ರಹಸನ ಪ್ರಸಂಗ

ನಮ್ಮ ಹಳೆಯ ಚಾಳಿಗಳನ್ನು, ಪ್ರಿಯ ಭಾವನೆಗಳನ್ನು ಮತ್ತು ಅಭಿಪ್ರಾಯಗಳನ್ನು ನಾವು ಬಿಟ್ಟುಕೊಡಲು ಇಷ್ಟಪಡುವುದೇ ಇಲ್ಲ. ಅವನ್ನು ಬಿಟ್ಟರೆ ನಮಗೆ ಪ್ರಯೋಜನವಾಗುವಂತಿದ್ದರೂ ಹೇಗಾದರೂ ಮಾಡಿ ಅವುಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತೇವೆ.

ಯಹೂದ್ಯ ಪುರೋಹಿತ(Rabbi)ನಿಗೊಬ್ಬ ಮಗನಿದ್ದ. ಅವನಿನ್ನೂ ವಯಸ್ಸಿಗೆ ಬಂದಿರಲಿಲ್ಲ.ಅವನು ಹೇಗೊ ಒಂದು ಡ್ರೈವಿಂಗ್ ಲೈಸೆನ್ಸ್ ಗಿಟ್ಟಿಸಿಕೊಂಡ. ತಂದೆಯ ಕಾರನ್ನು ಉಪಯೋಗಿಸಬೇಕು ಎಂಬ ಆಸೆಯಿಂದ ತಂದೆಯನ್ನು ವಿಚಾರಿಸಿದ. ತಂದೆ ಎರಡು ನಿಯಮಗಳನ್ನು ಹಾಕಿದ : "ನೀನು ತಾಲ್ಮುದ್ (ಯಹೂದ್ಯ ಶಾಸ್ತ್ರ) ಅಧ್ಯಯನ ಮಾಡಬೇಕು ಮತ್ತು ನಿನ್ನ ಕೂದಲನ್ನು ಕತ್ತರಿಸಬೇಕು." ಒಂದು ತಿಂಗಳ ನಂತರ ಮಗ ತಂದೆಯ ಹತ್ತಿರ ಹೋದ. ಅವನಾಗ ತಾಲ್ಮುದ್ ಅಧ್ಯಯನ ಮುಗಿಸಿದ್ದ. ತಂದೆ ಕೆಲವು ಪ್ರಶ್ನೆಗಳನ್ನು ಕೇಳಿ ಮಗನು ಅಧ್ಯಯನ ಮಾಡಿರುವನೆ ಇಲ್ಲವೆ ಎಂದು ಪರೀಕ್ಷಿಸಿದ. ಅನಂತರ ಹೇಳಿದ: "ನೀನು ಚೆನ್ನಾಗಿ ಅಧ್ಯಯನ ಮಾಡಿರುವೆ. ತುಂಬ ಸಂತೋಷ. ಆದರೆ ಇನ್ನೊಂದು ನಿಯಮವನ್ನು ನೀನು ಪೂರ್ತಿ ಮಾಡಿಲ್ಲ. ನೀನು ತಲೆ ಗಡ್ಡ ಮೀಸೆ ಬೋಳಿಸಿಯೇ ಇಲ್ಲ."

ಯುವಕನು ಸ್ವಲ್ಪ ಹೊತ್ತು ಆಲೋಚಿಸಿ ಉತ್ತರಿಸಿದ: "ನಾನು ಆ ವಿಷಯದ ಬಗ್ಗೆಯೇ ಆಲೋಚಿಸುತ್ತಿದ್ದೆ. ಸ್ಯಾಮ್‌ಸನ್‌ನಿಗೆ ನೀಳ ತಲೆಗೂದಲಿತ್ತು. ಮೋಸಸ್‌ನೂ ಕೂದಲನ್ನು ಬಿಟ್ಟಿದ್ದ. ಜೀಸಸ್‌ನೂ ಕೂಡ ಕೂದಲನ್ನು ಕತ್ತರಿಸಿರಲಿಲ್ಲ."

ತಂದೆ ಉತ್ತರಿಸಿದ: "ಹೌದು, ಅವರು ಎಲ್ಲ ಕಡೆಯೂ ನಡೆದುಕೊಂಡೇ ಹೋದರು!"

❧ ❧ ❧

ನಮ್ಮ ಆತ್ಮವಿಸ್ಮೃತಿಯಲ್ಲಿ ನಾವು ಏನು ಮಾಡುತ್ತೇವೆಂದು ಹೇಳಲಾಗುವುದಿಲ್ಲ ಮತ್ತು ಏನು ಮಾಡುತ್ತಿರುವೆವೆಂಬುದೇ ನಮಗೆ ಗೊತ್ತಿರುವುದಿಲ್ಲ. ಆದ್ದರಿಂದ ನಾವು ಯಾವಾಗಲೂ ಜಾಗ್ರತರಾಗಿರುವುದನ್ನು ಕಲಿಯಬೇಕು.

ಒಬ್ಬ ಸರ್ದಾರ್‌ಜಿ ಕೋಪದಿಂದ ಲೈಬ್ರರಿಗೆ ಧಾವಿಸಿದ. ಅವನ ಕಣ್ಣು ಕೆಂಪಗಿತ್ತು, ದೇಹ ನಡುಗುತ್ತಿತ್ತು. ಗ್ರಂಥಪಾಲಕನಿಗೆ ಅವನ ದೈತ್ಯಾಕೃತಿಯನ್ನು ನೋಡಿ ಭಯವಾಯಿತು. ಸರ್ದಾರ್‌ಜಿ ಗುಡುಗಿದ: "ಕಳೆದ ವಾರ ನಾನು ತೆಗೆದುಕೊಂಡು ಹೋದ ಪುಸ್ತಕ ತುಂಬ ಬೋರಿಂಗ್. ಒಂದು ಕಥೆಯೂ ಇಲ್ಲ ಅದರಲ್ಲಿ, ಬರೀ ಅಕ್ಷರಗಳು ಮತ್ತು ನಂಬರ್‌ಗಳು. ಅದನ್ನು ಯಾರು ಓದುತ್ತಾರೆ? ಎಂಥೆಂಥ ಪುಸ್ತಕ ಇಟ್ಟಿದ್ದೀರಪ್ಪ! ಥೂ!"

ಗ್ರಂಥಪಾಲಕನಿಗೆ ಈಗ ಸ್ವಲ್ಪ ಸಮಾಧಾನವಾಯಿತು. ಅವನು ಹೇಳಿದ: "ಸರ್, ನಮ್ಮ ಫೋನ್ ಬುಕ್ ತೆಗೆದುಕೊಂಡು ಹೋದವರು ನೀವೇ ಇರಬೇಕು!"

ಒಬ್ಬ ವಿದ್ಯಾರ್ಥಿ ಎಲ್ಲ ವಿಷಯಗಳಲ್ಲೂ ಬುದ್ಧಿವಂತನಾಗಿದ್ದ. ಆದರೆ ಗಣಿತ ಅವನ ತಲೆಗೆ ಹೋಗುತ್ತಿರಲಿಲ್ಲ. ಒಮ್ಮೆ ಗಣಿತದ ಪರೀಕ್ಷೆಯ ದಿನ ಗಣಪತಿಗೆ ಪ್ರಾರ್ಥನೆ ಮಾಡಿ, ಪ್ರಶ್ನೆಪತ್ರಿಕೆ ಸುಲಭವಾಗಿದ್ದರೆ ಗಣಪತಿಗೆ ಮೋದಕಮಾಡಿಸಿ ನಿವೇದಿಸುವುದಾಗಿ ಹರಕೆ ಹೊತ್ತನು.

ಪರೀಕ್ಷೆಗೆ ಹೋದನು. ಪ್ರಶ್ನೆಪತ್ರಿಕೆ ತುಂಬ ಸುಲಭವಾಗಿತ್ತು. ಅತ್ಯಾನಂದದಿಂದ ಬೇಗಬೇಗನೆ ಉತ್ತರ ಬರೆದನು. ಇನ್ನೂ ಪರೀಕ್ಷೆ ಮುಗಿಯುವುದಕ್ಕೆ ಅರ್ಧಗಂಟೆ ಇರುವಾಗಲೇ ಅವನು ಉತ್ತರ ಬರೆಯುವುದನ್ನು ಮುಗಿಸಿಬಿಟ್ಟಿದ್ದನು.

ಈಗ ಗಣಪತಿಗೆ ಮೋದಕ ನಿವೇದಿಸುವ ವಿಷಯ ನೆನಪಿಗೆ ಬಂತು. ತನ್ನ ಹತ್ತಿರವಿದ್ದ ಖಾಲಿ ಪೇಪರಿನಲ್ಲಿ ಹಿಟ್ಟು, ಬೆಲ್ಲ ಮುಂತಾದವುಗಳು ಎಷ್ಟು ಬೇಕು ಎಂದು ಲೆಕ್ಕ ಹಾಕತೊಡಗಿದ. ಅವನಿಗನಿಸಿತು, "ಇಷ್ಟೊಂದು ಖರ್ಚುಮಾಡುವ ಆವಶ್ಯಕತೆ ಏನಿದೆ? ಯಾವ ಭಾವದಿಂದ ನಿವೇದಿಸುತ್ತೇನೆ ಎಂಬುದು ಮುಖ್ಯವೇ ಹೊರತು, ಎಷ್ಟು ನಿವೇದಿಸುತ್ತೇನೆ ಎಂಬುದು ಮುಖ್ಯವಲ್ಲ. ಶಾಸ್ತ್ರಕ್ಕೆ ಎರಡು ಮೋದಕ ನಿವೇದಿಸಿದರಾಯಿತು" ಎಂದು. ಅದಕ್ಕೆ ಏನೇನು ಎಷ್ಟೆಷ್ಟು ಬೇಕು ಎಂದು ಲೆಕ್ಕ ಹಾಕತೊಡಗಿದ. ಆಗ ಅವನಿಗೆ ಹೊಳೆಯಿತು, ಗಣಪತಿ ಭಕ್ತಿಪ್ರಿಯ, ಮೋದಕದಿಂದ ಅವನಿಗೇನು, ಭಕ್ತಿಯಿಂದ ನೀರನ್ನು ಅರ್ಪಿಸಿದರೂ ಅವನು ಸ್ವೀಕರಿಸುತ್ತಾನೆ ಎಂದು. ಹೀಗೆ ಲೆಕ್ಕ ಹಾಕುತ್ತಿರುವಾಗ ಗಂಟೆ ಬಾರಿಸಿತು. ಅವನು ತನ್ನಲ್ಲಿದ್ದ ಪೇಪರನ್ನು ವೀಕ್ಷಕರಿಗೆ ಕೊಟ್ಟು ಮನೆಗೆ ಸಂತೋಷದಿಂದ ಹೋದ.

ಮನೆಯಲ್ಲಿ ತಂದೆ ಪ್ರಶ್ನೆಪತ್ರಿಕೆಯನ್ನು ಕೇಳಿದರು. ಅವನು ನಾನು ಚೆನ್ನಾಗಿ ಮಾಡಿದ್ದೇನೆ ಎಂದು ಹೆಮ್ಮೆಯಿಂದ ತನ್ನ ಕೈಯಲ್ಲಿದ್ದ ಪೇಪರನ್ನೆಲ್ಲ ತಂದೆಗೆ ಕೊಟ್ಟನು. ತಂದೆಗೆ ನೋಡಿ ಆಶ್ಚರ್ಯವಾಯಿತು, ಪ್ರಶ್ನೆಪತ್ರಿಕೆಯ ಜೊತೆ ಉತ್ತರ ಪತ್ರಿಕೆಯೂ ಅದರಲ್ಲಿತ್ತು. ಆ ವಿದ್ಯಾರ್ಥಿ ಗಂಟೆ ಬಾರಿಸಿದಾಗ ಆತುರದಲ್ಲಿ ತಾನು ಮೋದಕಕ್ಕಾಗಿ ಲೆಕ್ಕ ಹಾಕುತ್ತಿದ್ದ ಪೇಪರನ್ನು ಕೊಟ್ಟು ಉತ್ತರಪತ್ರಿಕೆಯನ್ನು ಮನೆಗೆ ತೆಗೆದುಕೊಂಡುಹೋಗಿದ್ದ!

ದೇವರಿಗೆ ಮೋಸ ಮಾಡಿದರೆ ನಮಗೇ ಮೋಸ.


**ಆಶ್ರಮದ ವಿಶೇಷ ಕಾರ್ಯಕ್ರಮಗಳು**

**ಏಪ್ರಿಲ್ 2002**

| | | |
|---|---|---|
| 8 | ಸೋಮವಾರ | ಏಕಾದಶಿ |
| 21 | ಭಾನುವಾರ | ಶ್ರೀರಾಮನವಮಿ |
| 23 | ಮಂಗಳವಾರ | ಏಕಾದಶಿ |

ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿಯೂ ಪ್ರತಿ ಶನಿವಾರ ಇಂಗ್ಲಿಷಿನಲ್ಲಿಯೂ ಸಂಜೆ 6 ರಿಂದ 7 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ಇರುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ